ವಿಷಯ:- ಖಾಸಗಿ ಕಾಲೇಜುಗಳಲ್ಲಿ ಡೋನೇಷನ್ ತೆಗೆದುಕೊಳ್ಳುತ್ತಿರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 484 (652)

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಖಾಸಗಿ ಶಾಲಾ ಕಾಲೇಜುಗಳು ಅದರಲ್ಲೂ ಬೆಂಗಳೂರು ನಗರದಲ್ಲಿ ಪೋಷಕರಿಂದ ಭಾರಿ ಪ್ರಮಾಣದಲ್ಲಿ ಡೋನೇಷನ್ ಪಡೆಯುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಇಲ್ಲ.

ಆ) ಸಮಗ್ರ ಶಿಕ್ಷಣ ಕಾಯ್ದೆಗನುಗುಣವಾಗಿ ನಿಯಮಾವಳಿಗಳನ್ನು ಹೊರಡಿಸಲಾಗುತ್ತಿದೆ. ಈ ನಿಯಮಾವಳಿಗಳು ಜಾರಿಗೆ ಬಂದ ಕೂಡಲೇ ಡೋನೇಷನ್ ಪಡೆಯುತ್ತಿರುವ ಶಾಲೆಗಳ ಮೇಲೆ ನಿಯಮಗಳ ಪ್ರಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ:- ಮಂಡ್ಯ ಜಿಲ್ಲೆಯಲ್ಲಿರುವ ಸಾರ್ವಜನಿಕ ಕೊಳವೆ ಬಾವಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 485 (1008)

ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ಜಿಲ್ಲೆಯಲ್ಲಿ ಇರುವ ಸಾರ್ವಜನಿಕ ಕೊಳವೆಬಾವಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಅವುಗಳಲ್ಲಿ ನೀರು ಬಾರದೇ ಇರುವ ದುರಸ್ತಿ ಮಾಡಬೇಕಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಇ) ಕೊಳವೆಬಾವಿ ತೆಗೆದರೂ ನೀರು ಬಾರದೆ ಇರುವ ಗ್ರಾಮಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೇ?

ಈ) ಹಾಗಿದ್ದಲ್ಲಿ ನೀರು ಬಾರದ ಗ್ರಾಮಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):-

ಅ) ಮಂಡ್ಯ ಜಿಲ್ಲೆಯಲ್ಲಿ ಒಟ್ಟು 9481 ಕೊಳವೆಬಾವಿಗಳು ಇರುತ್ತವೆ. ಇವುಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ತಾಲ್ಲೂಕು	ಕೊಳವೆಬಾವಿಗಳ ಸಂಖ್ಯೆ
1.	ಕೆ.ಆರ್.ಪೇಟೆ	1422
2.	ಮದ್ದೂರು	1549
3.	ಮಳವಳ್ಳಿ	1381
4.	ಮಂಡ್ಯ	1630
5.	ನಾಗಮಂಗಲ	1649
6.	ಪಾಂಡವಪುರ	988
7.	ಶ್ರೀರಂಗಪಟ್ಟಣ	862
		9481

ಆ)

ಕ್ರಮ ಸಂಖ್ಯೆ	ತಾಲ್ಲೂಕು	ನೀರು ಬಾರದೆ ಇರುವ ಕೊಳವೆ ಬಾವಿಗಳು	ದುರಸ್ತಿಮಾಡಿಸಬೇಕಾದ ಕೈಪಂಪು ಕೊಳವೆಬಾವಿಗಳು
1.	ಕೆ.ಆರ್.ಪೇಟೆ	129	30
2.	ಮದ್ದೂರು	167	322
3.	ಮಳವಳ್ಳಿ	121	62
4.	ಮಂಡ್ಯ	121	05
5.	ನಾಗಮಂಗಲ	161	50
6.	ಪಾಂಡವಪುರ	128	16
7.	ಶ್ರೀರಂಗಪಟ್ಟಣ	96	15
	ಒಟ್ಟು :	893	500

ಇ) ಇಲ್ಲ. ಮಂಡ್ಯ ಜಿಲ್ಲೆಯಲ್ಲಿ 2 ಗ್ರಾಮಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ಗ್ರಾಮಗಳಲ್ಲಿಯೂ ಕನಿಷ್ಠ ಒಂದು ಸಫಲ ಕೊಳವೆಬಾವಿ ಇರುತ್ತದೆ.

ಈ) ಈ ಎರಡು ಗ್ರಾಮಗಳಿಗೆ ರಿಗ್ ಯಂತ್ರವು ಹೋಗಲು ಸಾಧ್ಯವಿಲ್ಲವಾದ್ದರಿಂದ, ತೆರೆದಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜಿನ ವ್ಯವಸ್ಥೆ ಇದೆ.

ವಿಷಯ:- ಅಂಕೋಲಾ ಕ್ಷೇತ್ರದಲ್ಲಿ ಶಾಲಾ ದುರಸ್ತಿ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ : 486 (1164)

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಅಂಕೋಲಾ, ಸಿರ್ಸಿ ಯಲ್ಲಾಪುರ ತಾಲ್ಲೂಕಿನಲ್ಲಿ ಶಾಲಾ ದುರಸ್ತಿಗಾಗಿ ಬಿಡುಗಡೆಯಾದ ಹಣವೆಷ್ಟು (ತಾಲ್ಲೂಕುವಾರು ಶಾಲೆ ಹೆಸರು ನೀಡಿದ ಹಣದ ವಿವರ ನೀಡುವುದು)

ಆ) ಅಂಕೋಲಾ, ಸಿರ್ಸಿ, ಯಲ್ಲಾಪುರ ತಾಲ್ಲೂಕಿನಲ್ಲಿ ಅನೇಕ ಶಾಲೆಗಳು ದುರಸ್ತಿ ಅಥವಾ ಹೊಸದಾಗಿ ಕಟ್ಟುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು (ತಾಲ್ಲೂಕುವಾರು ನೀಡುವುದು)

ಇ) ಅಂಕೋಲಾ, ಸಿರ್ಸಿ, ಯಲ್ಲಾಪುರ ತಾ: ಅತ್ಯಂತ ಹೀನ ಸ್ಥಿತಿಯಲ್ಲಿರುವ ಶಾಲೆಗಳೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಈ) ದುಸ್ಥಿತಿಯಲ್ಲಿರುವ ಶಾಲೆಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಹಮ್ಮಿಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ)	ತಾಲ್ಲೂಕು	ಪ್ರಾಥಮಿಕ ಶಾಲಾ ಕಟ್ಟಡ ದುರಸ್ತಿಗಾಗಿ	ಪ್ರೌಢಶಾಲಾ ಕಟ್ಟಡ ದುರಸ್ತಿಗಾಗಿ
1.	ಅಂಕೋಲಾ	3.458	0.16 (ಲಕ್ಷಗಳಲ್ಲಿ)
2.	ಸಿರ್ಸಿ	3.348	2.30
3.	ಯಲ್ಲಾಪುರ	3.153	0.318

(ತಾಲ್ಲೂಕುವಾರು ಶಾಲೆ ಹೆಸರು ಮತ್ತು ಹಣಕಾಸಿನ ವಿವರದ ಪಟ್ಟಿಯನ್ನು ಲಗತ್ತಿಸಲಾಗಿದೆ)